ANUBHAVS



# ಮಕ್ಕಳ ಸಂರಕ್ಷಣೆ ಮಾಡುವವನು, ದೃಷ್ಟಿ ಭಾದೆಯಾಗದು

© Copyright 2010, Manasamarthyadata.com

manasamarthyadata.com



***-ಅಭಿಜಿತ್ ಮಯೇಕರ್, ಕಾಂದಿವಲಿ***

*ನೀನು ಮತ್ತು ನಾನು ಜತೆಗೂಡಿ*

*ಅಸಾಧ್ಯವಾವುದು ಇಲ್ಲ ನೋಡು*

*ಸಾರುವ ಮುಕ್ತ ಕಂಠದೀ ನುಡಿ*

*ರಾಜಾಧಿರಾಜ ಅನಿರುದ್ಧ*

ನನಗೆ ಸದ್ಗುರು ಶ್ರೀ ಅನಿರುದ್ಧ ಬಾಪೂರವರ ಚರಣಗಳ ಬಳಿ ಸಾರಿ 2-3 ವರ್ಷಗಳೇ ಸಂದವು. ನನ್ನ ಪತ್ನಿ ಮೃಣ್ಮಯಿ (ಪೂರ್ವಾಶ್ರಮದ ಹೆಸರು ರೇಶ್ಮಾ ಕಾಂದಳಕರ್)ಯ ತವರಿನಲ್ಲಿ ಎಲ್ಲರೂ ಬಾಪೂಮಯರಾಗಿರುವರು. ಆದುದರಿಂದ ಮದುವೆಯ ನಂತರ ಅವರಗಳ ಬಾಯಿಯಿಂದ ಬಾಪೂರವರ ಮಹಿಮೆಯನ್ನು ಕೇಳಿ ನನ್ನ ಮನಸ್ಸು ನನಗರಿವಿಲ್ಲದೆಯೇ ತಾನೇ ತಾನಾಗಿ ಬಾಪೂರವರ ಕಡೆಗೆ ಆಕರ್ಷಿತವಾಗತೊಡಗಿತು ಹಾಗೂ ಮೆಲ್ಲಮೆಲ್ಲನೇ ನೋಡ ನೋಡುತ್ತಲೇ ಬಾಪೂ ನಮ್ಮ ಜೀವನದ ಸುಖ-ದುಃಖ ಒಂದಂಗವೇ ಆಗಿ ಬಿಟ್ಟರು. ನಾವೂ ಕೂಡಾ ಬಾಪೂಮಯರಾದೆವು. ನಮಗೆ ಬಾಪೂರವರ ಕೃಪೆಯ ಹಲವಾರು ಅನುಭವಗಳಾಗಿವೆ. ಆದರೆ, ನಾನೀಗ ನಿಮಗೆ ಹೇಳ ಹೊರಟಿರುವ ಘಟನೆಯಿಂದ ಮಾತ್ರ ನಾವು ಜನ್ಮ -ಜನ್ಮಾಂತರಗಳವರೆಗೂ ಬಾಪೂರವರ ಋಣಿಗಳಾದೆವು.

ನಮ್ಮ ಮದುವೆಗೆ ಮೂರು ವರ್ಷಗಳಾಗಿದ್ದರೂ ಕೂಡಾ ನಮ್ಮ ಮಗುವಿನ ಆಸೆ ಆಸೆಯಾಗಿಯೇ ಉಳಿದಿದ್ದಿತ್ತು. ನಾವು ಬಾಪೂರವರಿಗೆ ಪ್ರಾರ್ಥಿಸಿಕೊಂಡೆವು. ''ಬಾಪೂ ನಮ್ಮ ಜೀವನದಲ್ಲಿಯೂ ಒಂದು ಮಗು ಇರಲಿ'' ಎಂದು. ಬಾಪೂರವರ ಕೃಪಾಶೀರ್ವಾದದಿಂದ ಮಣ್ಮಯಿಯು ಗರ್ಭಿಣಿಯಾದಳು. ಆಕೆಗೆ ಎಂಟನೇ ತಿಂಗಳು ನಡೆಯುತ್ತಿರುವಾಗ ನಾವು ಸಾಯಿ ನಿವಾಸಕ್ಕೆ ದರ್ಶನ ಪಡೆಯಲು ಹೋಗಿ ಬಂದೆವು. ಒಂಭತ್ತು ತಿಂಗಳು ಮತ್ತು ಒಂಭತ್ತು ದಿನಗಳಾದ ಮರುದಿನವೇ ಆಕೆಗೆ ನೋವು ಕಾಣಿಸಿಕೊಂಡಿತು. ಅಂದು 5 ಅಕ್ಟೋಬರ್, 2005ರಂದು ಮಧ್ಯಾಹ್ನ ಸುಮಾರು ಮೂರು ಘಂಟೆಗೆ ಆಕೆಯನ್ನು ನಾವು ಆಸ್ಪತ್ರೆಗೆ ದಾಖಲು ಮಾಡಿದೆವು. ವೈದ್ಯರು ರಾತ್ರಿಯ ವರೆಗೆ ಈಕೆಯ ಡೆಲಿವರಿ ಆಗಬಹುದು ಎಂದರು. ಸಂಪೂರ್ಣ ರಾತ್ರಿ

ಕಳೆದರೂ ಕೂಡಾ ಯಾವುದೇ ರೀತಿಯ ಪ್ರಗತಿ ಕಂಡುಬರಲಿಲ್ಲ. ಆದರೆ, ಆ ನೋವಿನಲ್ಲಿಯೂ ಕೂಡಾ ಆಕೆ ಸತತವಾಗಿ ಬಾಪೂರವರ ಜಪವನ್ನು ಮಾಡುತ್ತಲೇ ಇದ್ದಳು.

ಮುಂಜಾನೆಯ 6 ಘಂಟೆಯ ಸುಮಾರಿಗೆ ವೈದ್ಯರು ಕ್ವಾಂಪ್ಲಿಕೇಶನ್ ನಿರ್ಮಾಣವಾದ ಕಾರಣ ಸಿಝೇರಿಯನ್ ಮಾಡುವ ನಿರ್ಣಯವನ್ನು ತೆಗೆದುಕೊಂಡರು. ಬಾಪೂರವರ ಕೃಪೆಯಿಂದ ಆಕೆಯ ಡೆಲಿವರಿ ಆಗಿ ನವರಾತ್ರಿಯ ಉತ್ಸವದಂದು ನಮಗೆ ಕನ್ಯಾರತ್ನ ದೊರಕಿತು. ಆದರೆ, ಮಗುವು ತಾಯಿಯ ಉದರದಲ್ಲಿರುವಾಗಲೇ ಶೀ ಮಾಡಿದುದರಿಂದ ಆ ಶೀಯು ಮಗುವಿನ ಶರೀರ ಸೇರಿತ್ತು. ಆದುದರಿಂದ ವೈದ್ಯರು ಮಗುವನ್ನು ಕೂಡಲೇ ಐಸಿಸಿಯುಗೆ ಕೊಂಡೊಯ್ಯಬೇಕು ಎಂದು ಹೇಳಿದರು. ಅದಕ್ಕೆ ಶ್ವಾಸೋಚ್ಛ್ವಾಸ ಮಾಡಲು ಕಷ್ಟವಾಗುತ್ತಿತ್ತು. ಆದುದರಿಂದ ಕೂಡಲೇ ಆಕ್ಸಿಜನ್ ಪೂರೈಸಬೇಕಾಗಿತ್ತು.

ಮಣ್ಮಯಿಗೆ ಪ್ರಜ್ಞೆ ಮರಳುವ ಮುಂಚೆಯೇ ಮಗುವನ್ನು ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಇಲ್ಲಿಂದಲೇ ನಮ್ಮ ಅಗ್ನಿ ಪರೀಕ್ಷೆ ಶುರುವಾಯಿತು. ನನಗೇನು ಮಾಡುವುದೆಂಬುದೇ ತೋಚುತ್ತಿರಲಿಲ್ಲ. ಮಗುವಿನ ಎಲ್ಲಾ ವರದಿಗಳು ನಾರ್ಮಲ್ ಬಂದವು. ವೈದ್ಯರು 1-2 ದಿನಗಳ ನಂತರ ಆಕ್ಸಿಜನ್ ತೆಗೆಯಬಹುದೆಂದು ಹೇಳಿದರು. ಆದರೆ, 304 ದಿನಗಳು ಕಳೆದ ನಂತರವೂ ಕೂಡಾ ಮಗುವಿಗೆ ಶ್ವಾಸೋಚ್ಛ್ವಾಸ ಮಾಡುವುದು ಸಾಧ್ಯವಾಗುತ್ತಿರಲಿಲ್ಲ. ಇದುವರೆಗೂ ಮೃಣ್ಮಯಿಯು ಮಗುವನ್ನೇ ನೋಡಿರಲಿಲ್ಲ. ಮಗುವಿಗೆ ಇದುವರೆಗೂ ತಾಯಿಯ ಹಾಲು ಕುಡಿಸಿರಲಿಲ್ಲ. ಆದುದರಿಂದ ಆಕೆ ಅತ್ತೂ ಅತ್ತೂ ಒಂದು ತರಹಾ ಆಗಿದ್ದಳು. ನಾವು ವೈದ್ಯರಿಗೆ ಹೇಳಿ ಆಕೆಯನ್ನು ಮಗುವಿದ್ದ ಆಸ್ಪತ್ರೆಗೆ ವರ್ಗಾಯಿಸಿದೆವು. ಆದರೂ ಕೂಡಾ ಮಗುವಿಗೆ ಮೊಲೆ ಹಾಲುಣಿಸುವುದು ಸಾಧ್ಯವಾಗುತ್ತಿರಲಿಲ್ಲ. ಆಕ್ಸಿಜನ್ ತೆಗೆದ ಕೂಡಲೇ ಮಗುವಿನ ಮೈಯೆಲ್ಲಾ ನೀಲಿ ಬಣ್ಣಕ್ಕೆ ತಿರುಗುತ್ತಿತ್ತು. ವೈದ್ಯರು ಪ್ರಯತ್ನಿಸುತ್ತಲೇ ಇದ್ದರಾದರೂ ಏನು ಗುಣ ಕಾಣುತ್ತಿರಲಿಲ್ಲ. ನಮ್ಮ ಧೈರ್ಯ ಕುಸಿಯುತ್ತಿದ್ದರೂ ಕೂಡಾ ಬಾಯಿಯಿಂದ ಬಾಪೂರವರ ನಾಮ ಜಪವು ನಡೆದೇ ಇದ್ದಿತು.

ಕೊನೆಗೆ ನಾವು ಸಾಯಿ ನಿವಾಸಕ್ಕೆ ಅಪ್ಪಾರವರಿಗೆ ಫೋನ್ ಮಾಡಿ ವಿಷಯ ತಿಳಿಸಿದೆವು. ಅವರು ಘೋರಕಷ್ಟೋದ್ಧರಣ ಸ್ತೋತ್ರವನ್ನು ಪಠಿಸಿರಿ ಎಂದು ಹೇಳಿದರು. ಕೂಡಲೇ ನಾವು ಘೋರಕಷ್ಟೋದ್ಧರಣ ಸ್ತೋತ್ರವನ್ನು ಪಠಿಸತೊಡಗಿದೆವು. ಸ್ವಲ್ಪ ಸಮಯದ ನಂತರ ಮಗುವು ಆಕ್ಸಿಜನ್ ಸಹಾಯದಿಂದಲೇ ಆದರೂ ಪ್ರಥಮ ಬಾರಿಗೆ ತಾಯಿಯ ಹಾಲನ್ನು ಕುಡಿಯಿತು.



ಇದನ್ನು ನೋಡಿದ ನಮಗೆ ಸ್ವಲ್ಪ ಧೈರ್ಯವೆನಿಸಿತು. ಇಷ್ಟಾದ ನಂತರವೂ ಕೂಡಾ ಮಗು ಆಕ್ಸಿಜನ್ ಇಲ್ಲದೇ ಇರುವುದೇ ಸಾಧ್ಯವಿರಲಿಲ್ಲ. 6-7 ದಿವಸಗಳೇ ಸಂದವು. ಈಗ ಮಾತ್ರ ವೈದ್ಯರಿಗೂ ಚಿಂತೆಯೆನಿಸಿತು. ವೈದ್ಯರು ಹೃದಯದ ತೊಂದರೆಯಿರಬೇಕು ಎಂದು ಕೊಂಡು ಅದರ ಟೆಸ್ಟ್ ಮಾಡಿಸಿದರು. ನಮಗಂತೂ ಹೊಟ್ಟೆಯುರಿಯುತ್ತಿತ್ತು. ಆ ಹಸುಗೂಸು ಇನ್ನೆಷ್ಟು ಪಾಡು ಪಡಬೇಕು. ಮಾತೃಹೃದಯ ತಡೆಯಲಾರದೇ ಮೃಣ್ಮಯಿಯು ಅಳುತ್ತಲೇ ಪುನಃ ಅಪ್ಪಾರವರಿಗೆ ಫೋನ್ ಮಾಡಿದಳು. ಅವರು ಪರಿಸ್ಥಿತಿಯ ಗಾಂಭೀರ್ಯತೆಯನ್ನು ತಿಳಿದುಕೊಂಡು ಕೂಡಲೇ ಹ್ಯಾಪೀ ಹೋಮ್‌ನಲ್ಲಿ ಡಾ. ಶಿವಾರವರನ್ನು ಭೇಟಿಯಾಗಲು ಹೇಳಿದರು. ಗುಬ್ಬಿಯ ಕಾಲಿಗೆ ದಾರ ಕಟ್ಟಿಕೊಂಡೊಯ್ಯುವಂತೆ ಬಾಪೂ ನಮ್ಮನ್ನು ಹ್ಯಾಪೀ ಹೋಮ್‌ಗೆ ಕರಕೊಂಡರು.

ವೈದ್ಯರು ಎಲ್ಲಾ ವೃತ್ತಾಂತವನ್ನು ಕೇಳಿ ತಿಳಿದುಕೊಂಡು ನಂತರ ನನ್ನನ್ನು ಹೊರಗೆ ಕುಳಿತುಕೊಳ್ಳುವಂತೆ ಹೇಳಿದರು. ಅದೇ ಸಮಯದಲ್ಲಿ ಮಗುವಿನ 2ಡಿ ಇಕೊ ಟೆಸ್ಟ್ ನಡೆಯುತ್ತಿತ್ತು. ಕೆಲ ಕ್ಷಣಗಳ ನಂತರ ನನಗೆ ಮೃಣ್ಮಯಿಯ ಎಸ್‌ಎಂಎಸ್ ಬಂದಿತು. ಮಗುವಿನ ರಿಪೋರ್ಟ್ ನಾರ್ಮಲ್ ಆಗಿದೆ. ಬಾಪೂರವರು ಹೇಳದೇ ಮಾಡಿ ತೋರಿಸಿದ್ದರು. ನಾನಿದ್ದೇನೆ ಬೆಂಗಾವಲಿಗೆ. ನನ್ನ ಕಣ್ಣುಗಳು ತುಂಬಿಕೊಂಡವು. ಸಂಕಟ ಸರಿದು ಹೋಗಿತ್ತು. ನಂತರ ಡಾ. ಶಿವಾರವರು ನನ್ನನ್ನು ಕರೆದು ''ಸುಚಿತ್‌ದಾದಾ ಹೇಳಿದ್ದಾರೆ ಮಗುವಿನ ಚಿಕಿತ್ಸೆ ನಡೆಯುತ್ತಿರಲಿ ಅದರೊಂದಿಗೆ ಪ್ರತಿ ದಿನ ಕಡಿಮೆಯೆಂದರೆ 12 ಬಾರಿ ರಾಮರಕ್ಷೆಯನ್ನು ಜಪಿಸಿರಿ, ಎಲ್ಲವೂ ಒಳ್ಳೆಯದಾಗುತ್ತದೆ'' ಎಂದರು. ಇದನ್ನು ಕೇಳಿದ ನನಗೆ ಹಾಯೆನಿಸಿತು. ನಾವು ಆಗಿನಿಂದಲೇ ರಾಮರಕ್ಷೆ ಜಪಿಸಲು ಶುರುಮಾಡಿದೆವು ಹಾಗೂ ನಿಜವಾಗಿಯೂ ಚಮತ್ಕಾರವಾಯಿತು. ಮಧ್ಯಾಹ್ನ 3 ಘಂಟೆಯ ನಂತರ ಮಗುವು ಆಕ್ಸಿಜನ್ ತಾಗಿಸದೇ ಸರಿಯಾಗಿ ಶ್ವಾಸೋಚ್ಛ್ವಾಸ ಮಾಡತೊಡಗಿತು. ಮಕ್ಕಳ ಸಂರಕ್ಷಣೆ ಮಾಡುವನು, ದೃಷ್ಟಿ ಭಾದೆಯಾಗದು ಎಂಬ ತಮ್ಮ ವಚನವನ್ನು ಬಾಪೂರವರು ನಿಜವಾಗಿಸಿದರು. ಆಸ್ಪತ್ರೆಯ ವೈದ್ಯರು ಕೂಡಾ ವಿಸ್ಮಯ ಚಕಿತರಾದರು. ಇದುವರೆಗೆ 15 ನಿಮಿಷ ಕೂಡಾ ಆಕ್ಸಿಜನ್ ಸರಬರಾಜು ಇಲ್ಲದೇ ಇರಲಾರದಂತಹ ಮಗುವು ಇದ್ದಕ್ಕಿದ್ದಂತೆಯೇ ನಾರ್ಮಲ್ ಆದುದಾದರೂ ಹೇಗೆ? ಯಾರ ಹತ್ತಿರವೂ ಇದಕ್ಕೆ ಉತ್ತರವಿರಲಿಲ್ಲ. ಆದರೆ ನಮಗೆ ಮಾತ್ರ ಖಂಡಿತವಾಗಿ ದೇವರ ದೇವ ನಮ್ಮ ಪ್ರಿಯ ಬಾಪೂರಾಯ ಸದಾ ನಮ್ಮ ಬೆಂಗಾವಲಾಗಿ ಇದ್ದಾರೆ. ಈ ಕ್ಷಣದಲ್ಲಿ ನನಗೆ ಬಾಪೂರವರಲ್ಲಿ ಕೇವಲ ಒಂದೇ ಒಂದು ಬೇಡಿಕೆಯನ್ನು ಕೋರಿಕೊಳ್ಳಬೇಕೆನಿಸುತ್ತದೆ.

ಬಾಂಧ ಮಾಝ್ಯಾ ಮನಾ ಘಟ್ಟತುಝ್ಯಾ ಪದಾ

ಸರ್ವ ಯೇ ತ್ಯಾಗತಾ ನಾ ತುಲಾ.....ನಾ ತುಲಾ

(ಕಟ್ಟಿಕೋ ನನ್ನ ಮನವನ್ನು ನಿನ್ನ ಚರಣಗಳಲ್ಲಿ, ಸರ್ವವನ್ನೂ ತ್ಯಜಿಸುವುದು ಸಾಧ್ಯ. ಆದರೆ ನಿನ್ನನ್ನಲ್ಲ.....ನಿನ್ನನ್ನಲ್ಲ)

ANUBHAVS

# HARI OM

© Copyright 2010, Manasamarthyadata.com

manasamarthyadata.com